Reg No. B G 155 21-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆತ್ಯಾಚಾರಿಗಳಿಗೆ ಪಾಕೀಸ್ತಾನದಲ್ಲಿ ಛಡೀ ಏಟು

ಮಿಯಾಮಿ – ಫಿಲಿಪೆನೀಕ್ ಸುಂದರಿ ಲ್ಲೀರಿಯಾ ಡಿಯಾಜ್ ವಿಶ್ವಸುಂದರಿ ಯಾಗಿ ಆಯ್ಕೆಯಾದಳು.

★

ಮದರಾಸು— ಇಂಡಿಯರ್ ಏರ್ ಲೈ ನ್ಸ್ ಚಂದ್ರನಲ್ಲಿಗೆ ಹೋಗಲು ಪ್ರಾರಂಭಿ ಸಿದೊಡನೆ ತಮಗೆ ಸೀಟ್ ಕಾದಿಡಬೇ ಕೆಂದು ಮೂವರು ಯುವಕರು ತಿಳಿಸಿ ದ್ದಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಅಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ನುನ್ಮಹಾರಾಜರು, ಮತ್ತಿತರ ಗಣ್ಯರು ಫಿನಂದಿಸಿ ಶುಭ ಕೋರಿರುವರು. ಶ್ರೀ ಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗು ಗಳವರು ಶುಭಾಶೀರ್ವಾದ ಮತ್ತು ಧನ ವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಾನಿಯವರು, ಶ್ರೀ ಮಾಧವ್ ಶೆನ್ಯೈ ರು, ಶ್ರೀ ಎಂ. ಬಿ. ಬಸವಯ್ಯನವರು, ೆರಾ ಟಾಕೇಸಿನವರು, ಪದ್ಮಭೂಷಣ ತ್ರದಾನಿ ಡಾ|| ಎಂ.ಸಿ.ಮೋದಿಯವರು ಾ|| ಆರ್. ಎಸ್. ನಂಜುಂಡಸ್ವಾಮಿ ಲ್ಲಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ಸಿಂಹಯ್ಯಂಗಾರ್ (ಹೊಂಗನೂರು) ರೂ ಶುಭಾಶಯದೊಡನೆ ನೆರವು ನೀಡಿ ನರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ೀ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಭ ಸಂದೇಶಗಳನ್ನೂ, ಧನನೆರವನ್ನೂ ರ ವಿಶ್ವಾಸಗಳಿಂದ ನೀಡಿ ಸಹಕರಿಸ ಕಾಗಿ ವಿನಂತಿಸಿ, ಈ ಸೇರುವನಂದು ತಜ್ಞತಾಪೂರ್ವಕವಂದಿಸುತ್ತೇವೆ.

'ಸಂಪಾದಕ ' ಸತ್ಯವಾದಿ '
ಚಾಮರಾಜಸ್ತರಂ. ಮೈಸೂರು 4

ಚಂದ್ರನಲ್ಲಿ ಮಾನವರು

ಹೌಸ್ಟ್ (ಟೆಕ್ಸಾಸ್)— ಅಪೊಲೋ 11 ರಲ್ಲಿ ಚಂದ್ರನಲ್ಲಿಗೆ ಹೋದ ಗಗನ ಯಾನಿಗಳು ಆರಂಸ್ಟ್ರಾಂಗ್ ಮತ್ತು ಆಲ್ಡ್ರಿನ್ ಚಂದ್ರಗ್ರಹದ ಮೇಲೆ ಪಾದಾರ್ಪಣೆ ಮಾಡಿದ ಕೀರ್ತಿಗಳಿಸಿದರು ; ಅಲ್ಲಿ ಕೆಲವು ಗಂಟೆಗಳ ನಿದ್ರಾನಂತರ ನಿಲ್ದಿಗೆ ತರಲು ಅ ಲ್ಲಿಯ ಮಣ್ಣು ಮತ್ತು ಕಲ್ಲುಗಳನ್ನು ಶೇ ಖರಿಸಲು ಉದ್ಯುಕ್ತರಾದರು.

●

ಭೂಮಾಲೀಕರ ಸಮ್ಮೇಳನ

ಮೈಸೂರು— ನಿನ್ನೆ ಟೌನ್ ಹಾಲಿನಲ್ಲಿ ನಡೆದ ರಾಜ್ಯದ ಭೂಮಾಲೀಕರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಹೈ ಕೋರ್ಟು ಮಾಜೀ ನ್ಯಾಯಾಧೀಶರಾದ ಶ್ರೀ ನಾಗೇಶ್ವರಯ್ಯನವರು– ಮಾಲೀಕ ಹಾಗೂ ಕೃಷಿಕರ ನಡುವೆ ಸೌಹಾರ್ದ್ರ ಉಳಿಸಲು, ಕೃಷಿ ಉತ್ಪನ್ನ ಕಡಮೆಯಾಗದಿರಲು, ರಾಜ್ಯದ ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ತರುವುದು ಅಗತ್ಯವೆಂದು ಹೇಳಿದರು — ತಿದುಪಡಿಗಳನ್ನು ಸೂಚಿಸಲು ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು.

★

ಮಂಗಳಾರತಿಗೆ ಶುಲ್ಕ

ನಂಜನಗೂರು— ದೇವಸ್ಥಾನದಲ್ಲಿ ಮಂಗಳಾರತಿಗೆ ಆಗಸ್ಟ್ 1 ರಿಂದ ಶುಲ್ಕ ವಸೂಲಿ ಜಾರಿಗೆ ಬರುವುದು.

★

ಹಳೇ ಮೈಸೂರು ವಿಷಯದಲ್ಲಿ

ಮೈಸೂರು— ಹಳೇ ಮೈಸೂರು ಪ್ರದೇಶವನ್ನು ಉಪೇಕ್ಷಿಸಲಾಗಿದೆ ಎಂಬ ಆಪಾದನೆ ಪರಿಶೀಲನೆಗೆ ಒಂದು ಸ್ವತಂತ್ರ ಜಾದ ಉನ್ನತಾಧಿಕಾರದ ಸಮಿತಿ ರಚಿಸಬೇಕೆಂದು ಮಾಜಿ ಮುಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಭೂಮಾಲೀಕರ ಸಮ್ಮೇಳನ ಉದ್ಘಾಟಿಸುತ್ತಾ ಮಾಡಿದ ಭಾಷಣದಲ್ಲಿ ಹೇಳಿದರು

ಚಾವಟಿಯಿಂದ ಹೊಡೆತ

ಪಾಕಿಸ್ತಾನದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಅಥವಾ ಅಪಾಹಾರ ಮಾಡಿದವರಿಗೆ ಚಾವಟಿಯಿಂದ ಹೊಡೆಯುವ ಶಿಕ್ಷೆಯನ್ನು ವಿಧಿಸಲು ಮಾರ್ಷಿಯಲ್ ಅಧಿಕಾರಿಗಳು ಆಜ್ಞೆ ಮಾಡಿದ್ದಾರೆ – ಹಿಂಸಾತ್ಮಕ ಕಳ್ಳತನ, ಮನೆಮುರಿಯುವುದು, ದನ ಕದಿಯುವುದೂ, ಇನಕ್ಕೂ ಚಾವಟಿಯಿಂದ ಹೊಡೆಯುವ ಶಿಕ್ಷೆ ವಿಧಿಸಲಾಗುವುದು.

★

ಅಶ್ರುವಾಯು ಲಾಠಿ ಪ್ರಯೋಗ

ಬೆಂಗಳೂರು— ತಾರಾ ವೇಳಕ್ಕೆ ನಿನ್ನೆ ಆಗಮಿಸಿದ ತಾರೆಯರನ್ನು ನೋಡಲು ಕಂಠೀರವಾ ಕ್ರೀರಾಂಗದ ಹೊರಗೆ ಸೇರಿದ್ದ ಸಹಸ್ರಾರು ಮಂದಿ ಉದ್ರಿಕ್ತಕೊಂಡು ದಾರಿಯಲ್ಲಿ ಸಂಚರಿಸುತ್ತಿದ್ದ ವಾಹನಗಳು ಮತ್ತು ಪಾದಚಾರಿಗಳ ಮೇಲೆ ಕಲ್ಲಿನಹೊಡೆಯಲುಪಕ್ರಮಿಸಿದಾಗ ಅವರ ಮೇಲೆ ಪೋಲೀಸರು ಅಶ್ರುವಾಯು ಮತ್ತು ಲಾಠಿ ಛಾರ್ಜು ಮಾಡಿದರು.

★

ಬ್ಯಾಂಕುಗಳ ಸ್ಥಿತಿಗತಿ

ಬೊಂಬಾಯಿ— ಸರಕಾರವು ರಾಷ್ಟ್ರೀಕರಣ ಮಾಡಿದ 14 ಬ್ಯಾಂಕುಗಳ (1968 ರ ಕಡೆಯಲ್ಲಿ) ಒಟ್ಟು ರೂ. 2741.76 ಕೋಟಿ ಠೇವಣಿಯೂ ರೂ. 1743.66 ಕೋಟಿ ಕೊಟ್ಟಿರುವುದೂ ಆಗಿದೆಯೆಂದು ರಿಜರ್ವ್ ಬ್ಯಾಂಕ್ ಅಂಕಿಅಂಶ ತಿಳಿಸುತ್ತದೆ.

★

ಪೋಪರ ಆಶಯ

ಕಾಸ್ಟೆಲ್‌ಗಂಡೊಲ್ಫೊ (ಇಟಲಿ)— ಪೋಪ್ ಪಾಲರು, ಮಾನವನು ಬಹಿರಾಕಾಶವನ್ನು ಆಕ್ರಮಿಸಿದ್ದನ್ನು ಪ್ರಶಂಸಿಸುತ್ತಾ, ಮಾನವನ್ನು ಪ್ರಥಮತಃ ತನ್ನನ್ನು ಗೆದ್ದುಕೊಂಡು ಎಲ್ಲಾ ಯಿದ್ಧಗಳನ್ನು ಮುಕ್ತಾಯಗೆಜಳಿಸಬೇಕೆಂದರು.

ರಾಷ್ಟ್ರೀಕರಣಕ್ಕೆ ವಿರೋಧ

ನವದೆಹಲಿ— ಪಾರ್ಲಿಮೆಂಟಿದಲ್ಲಿ ಜನ ಸಂಘ ಮತ್ತು ಸ್ವತಂತ್ರಪಕ್ಷ ಬ್ಯಾಂಕು ರಾಷ್ಟ್ರೀಕರಣ ಸುಗ್ರೀವಾಜ್ಞೆಯನ್ನು ವಿರೋಧಿಸುವವು.

★

ಬ್ಯಾಂಕು ರಾಷ್ಟ್ರೀಕರಣ ವಿರುದ್ಧ

ಬ್ಯಾಂಕು ರಾಷ್ಟ್ರೀಕರಣ ವಿರುದ್ಧ ರಿಟ್ ಹಾಕಲು ಪ್ರಯತ್ನ ನಡೆಯುತ್ತಿದೆ.

●

ರೂಪಾಯಿ ಬೆಲೆ ತಗ್ಗಿತು

ಹಾಂಕಾಂಗ್— ಹಾಕಾಂಗು ವ್ಯಾಪಾರು ಕಟ್ಟಿಯಲ್ಲಿ ಭಾರತ ರೂಪಾಯಿ ಬೆಲೆ ತಗ್ಗಿದ್ದು ಇನ್ನೂ ಇಳಿಯುವ ಸಂಭವವಿದೆ.

○

ದೈವಭಕ್ತನ ಪ್ರಾಣಾರ್ಪಣೆ

ಪೆರೂವಿದ ಜೆಹೂವಾ ಕೋಮಿನ ಚಾತಜ್ ಕಾಲ್ಡರ್ಕ್ ಅಪೊಲೊ 11 ಚಂದ್ರನಲ್ಲಿಗೆ ಹಾರಿದ್ದನ್ನು ಪ್ರತಿಭಟಿಸಿ ಇರಿದುಕೊಂಡು ಸತ್ತನು. ರಷ್ಯನರು ಮತ್ತು ಅಮೇರಿಕನ್ನರು ಬಹಿರಾಕಾಶ ಶೋಧಿಸುತ್ತಾ, ದೇವರ ವಿಚಾರಗಳಲ್ಲಿ ಕೈಹಾಕಿರುವದರಿಂದ ತಾನು ಪ್ರಾಣಬಿಡುವದಾಗಿ ತನ್ನ ಸಂಸಾರಕ್ಕೆ ತಿಳಿಸಿದ್ದನು.

★

ರಾಷ್ಟ್ರಾಧ್ಯಕ್ಷರು

ನವದೆಹಲಿ— ಭಾರತದ ಹಂಗಾಮಿ ರಾಷ್ಟ್ರಪತಿಯಾಗಿ ಸುಪ್ರೀಂ ಕೋರ್ಟು ಮುಖ್ಯ ನ್ಯಾಯಾಧೀಶರು ಪ್ರಮಾಣವಚನ ಸ್ವೀಕರಿಸಿದರು.

★

ಮೈಸೂರು ರೇಸಸ್

ಮೈಸೂರು ಕುದುರೆ ಜಾಜು ಆಗಸ್ಟ್ 20 ರಿಂದ ಸಿಪ್ಟಂಬರು 18 ರ ಕಡೇವರೆಗೆ 7 ದಿನಗಳು ನಡೆಯುವುದು.

(2)

ಬ್ಯಾಂಕು ರಾಷ್ಟ್ರೀಕರಣ

ನವದೆಹಲಿ— 14 ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣ ಬಗ್ಗೆ ಭಾರತ ಸರಕಾರ ಸುಗ್ರೀವಾಜ್ಞೆ ಹೊರಡಿಸಿದೆ – ವಿದೇಶಗಳಲ್ಲಿ ಸ್ಥಾಪಿತವಾದ ಬ್ಯಾಂಕುಗಳ ಇಲ್ಲಿಯ ಶಾಖೆಗಳ ರಾಷ್ಟ್ರೀಕರಣವಿಲ್ಲ.

★

ಮಂತ್ರಿ ಗೌರಿಯರ ಆಸ್ತಿ

ತ್ರಿವೇಂಡ್ರಂ— ಕೇರಳದ ಸಹಕಾರಿ ಸಂಸ್ಥೆ ಕಂದಾಯ ಮಂತ್ರಿ ಶ್ರೀಮತಿ ಗೌರಿ ಮಂತ್ರಿಯಾದ ಮೇಲೆ ತನ್ನ ಸ್ವಸ್ಥಾನವಾದ ತಿರಟಲ್ಲೈನಲ್ಲಿ ಸ್ವಲ್ಪ ಭೂಸ್ವತ್ತು ಹೊಂದಿದ್ದಾರೆ – 1967 ರಲ್ಲಿ ಆಕೆಯ ಆಸ್ತಿ ಪಟ್ಟಿಯಲ್ಲಿ ಇದು ಇರಲಿಲ್ಲ – 1967 ರಿಂದ ಇಬ್ಬರಿಂದ ಇವರು ಸಾಲ ಪಡೆದಿರುವ ರೂ. 280 ಇನ್ನೂ ತೀರಿಸಿಲ್ಲ : ಆದರೆ ಟ್ರಾವಂಕೂರು ಸ್ಟೇಟ್ ಬ್ಯಾಂಕಿನಲ್ಲಿ ರೂ. 20000 ಡಿಪಾಜಿಟ್ ಮಾಡಿದ್ದಾರೆ.

★

ಪರಮಾಣುಶಕ್ತಿ ಹೃದಯ

ಮೆಕ್ಸಿಕೊ— ಪರಮಾಣುಶಕ್ತಿ ಹೃದಯವು 1972 ರೊಳಗೆ ಸಿದ್ಧವಾಗುವುದೆಂದು ಈ ಬಗ್ಗೆ ಕಾರ್ಯತತ್ಪರರಾದ ವಿಜ್ಞಾನಿಗಳು ಹೇಳಿರುವರು.

ಮಗು ಹೆಸರು ಅಪೋಲೊ 11

ಲೆಬಾನೀಸಿನ 40 ವರ್ಷದ ಗೃಹಿಣಿ ರಿಸ್ಕಾ ಸಾಲಿಯರ್ ತನ್ನ ಈಗಿನ 11 ನೇ ಮಗುವಿಗೆ ಅಪೊಲೋ 11 ಎಂದು ಹೆಸರಿಟ್ಟರುವಳು – ಟೆಲಿವಿಜನ್ನಿನಲ್ಲಿ ಮಗು ವಿನೋಡನೆ ಕಾಣಿಸಿಕೊಂಡಳು.

★

ಎಸ್ಸೆಸ್ಪಿ ಚಳವಳಿ

ಹಜಾರಿಬಾಗ್— ಎಸ್ಸೆಸ್ಪಿ ದೇಶದ ಅನೇಕ ಕಡೆ ಚಳವಳಿ ಹೂಡುವುದೆಂದೂ, ಮುಖ್ಯವಾಗಿ ಭೂಮಿ ಇಲ್ಲದವರಿಗೆ ಭೂಮಿ ದೊರಕಿಸಲು ಇದೆಂದೂ ನಿರ್ಧರಿಸಲಾಗಿದೆಯೆಂದು ಕಾರ್ಯದರ್ಶಿ ಶ್ರೀ ಫರ್ನಾಂಡಸ್ ಎಂ. ಪಿ., ಯವರು ಹೇಳಿದರು – ಜೆಂಗಳೂರು, ಗುಲ್ಬರ್ಗಾ ಚಳವಳಿದಲ್ಲಿ ಸೇರಿದೆ.

★

ಋಗ್ವೇದದಲ್ಲಿದೆ

ಋಗ್ವೇದ (ಸುಮಾರು ಕ್ರಿ ಪೂ 4000) ದಲ್ಲಿ 400 ಕ್ಕೂ ಹೆಚ್ಚು ವಿವಿಧ ರೀತಿಯ ಔಷಧ ಮೂಲಿಕೆಗಳ ಹೆಸರಿದೆಯೆಂದು ಹೇಳಲಾಗಿದೆ.

★

ದೇಸಾಯರ ರಾಜೀನಾಮೆ

ನವದೆಹಲಿ— ಉಪಪ್ರಧಾನಿ ದೇಸಾಯರವರ ರಾಜೀನಾಮೆಯನ್ನು ಹಂಗಾಮಿ ರಾಷ್ಟ್ರಾಧ್ಯಕ್ಷರು ಸ್ವೀಕರಿಸಿದರು.



Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ಜಯಪ್ಪನದ 3 ನೇ. ವಾರ

ವುಡ್‌ಲಾಂಡ್ಸ್

ಉತ್ತರ ಭಾರತದಲ್ಲಿ ಕೋಲಾಹಲ ಎಬ್ಬಿಸಿರುವ ಅನೇಕ ಆಶ್ಚರ್ಯ ವಿಷಯಗಳಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ ನೀವು ನೋಡಲು ತಪ್ಪಿಸಿರಿ

ಅನೋಖಿ ರಾತ್

ಸಂಗೀತ – ರೋಷನ್

ತಾರಾಗಣ : ಸಂಜೀವ ಕುಮಾರ್ ಜಹೀದ ತರುಣ ಬೋಸ್ ಮುಮ್ತಾ ಮುಂತಾದವರು

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapuram, Mysore 4